ಕರ್ನಾಟಕ ರಾಜ್ಯ ನಿವೃತ್ತ ಪೊಲೀಸ್ ಅಧಿಕಾರಿಗಳ ಕ್ಷೇಮಾಭಿವೃದ್ಧಿ
ಸಂಘ (ರಿ.), ಬೆಂಗಳೂರು – ೫೬೦ ೦೨೩.

## ದಿನಾಂಕ: ೦೧-೧೧-೨೦೨೫ ರಂದು ಆಚರಿಸಿದ

# ಕರ್ನಾಟಕ ರಾಜ್ಯೋತ್ಸವದ

# ಸಚಿತ್ರಗಳ ಪಕ್ಷಿ ನೋಟ

ಕರ್ನಾಟಕ ರಾಜ್ಯ ನಿವೃತ್ತ ಪೊಲೀಸ್ ಅಧಿಕಾರಿಗಳ ಕ್ಷೇಮಾಭಿವೃದ್ಧಿ ಸಂಘವು ಭಾರತದ ಕರ್ನಾಟಕ ರಾಜ್ಯೋತ್ಸವ ಆಚರಣೆ ಕಾರ್ಯಕ್ರಮವನ್ನು ದಿನಾಂಕ: ೦೧-೧೧-೨೦೨೫ ರಂದು ಶನಿವಾರದ ಬೆಳಿಗ್ಗೆ ೦೯-೦೦ ಗಂಟೆಯಿಂದ ಸಂಘದ ಆವರಣದಲ್ಲಿ ಹಮ್ಮಿಕೊಳ್ಳಲಾಗಿತ್ತು. ಸಂಘದ ಆವರಣದಲ್ಲಿರುವ ಧ್ವಜ ಸ್ಥಂಭದ ಬಳಿ ನಾಡ ದೇವತೆ ಶ್ರೀ ಭುವನೇಶ್ವರಿ ದೇವಿ ಯವರ ಭಾವಚಿತ್ರಕ್ಕೆ ಪೂಜೆ ಸಲ್ಲಿಸಲಾಯಿತು.

















ಶ್ರೀಯುತ ಕೆ. ಬಿ. ಬೆಟ್ಟೇಗೌಡ, ಅಧ್ಯಕ್ಷರು, ಕರ್ನಾಟಕ ರಾಜ್ಯ ನಿವೃತ್ತ ಪೊಲೀಸ್ ಅಧಿಕಾರಿಗಳ ಕ್ಷೇಮಾಭಿವೃದ್ಧಿ ಸಂಘ, ಬೆಂಗಳೂರು ಹಾಗೂ ಸಂಘದ ಪದಾಧಿಕಾರಿಗಳು, ನಿಕಟ ಪೂರ್ವ ಅಧ್ಯಕ್ಷರು ಮತ್ತು ಹಿರಿಯ ಸದಸ್ಯರೊಡಗೂಡಿ ಕನ್ನಡ ಧ್ವಜಾರೋಹಣವನ್ನು ನೆರವೇರಿಸಿದರು.





ಕರ್ನಾಟಕ ರಾಜ್ಯೋತ್ಸವದ ಧ್ವಜಾರೋಹಣ ಕಾರ್ಯಕ್ರಮದಲ್ಲಿ ಹಾಜರಿದ್ದವರೆಲ್ಲರೂ ನಾಡ ಧ್ವಜಕ್ಕೆ ವಂದನೆ ಸಲ್ಲಿಸಿದರು. ಧ್ವಜ ವಂದನೆ ಜೊತೆಗೆ ನಾಡಗೀತೆಯನ್ನು ನುಡಿಸಿ, ಹಾಡಲಾಯಿತು.







ಕರ್ನಾಟಕ ರಾಜ್ಯ ನಿವೃತ್ತ ಪೊಲೀಸ್ ಅಧಿಕಾರಿಗಳ ಕ್ಷೇಮಾಭಿವೃದ್ಧಿ ಸಂಘದ ವಲಯ ಸಂಘಟನಾ ಕಾರ್ಯದರ್ಶಿಯವರಾದ ಶ್ರೀಯುತ ಎಂ. ಎಸ್. ಮಂಜೇಗೌಡ ರವರು ರಾಷ್ಟ್ರಕವಿ ಶ್ರೀ ಕುವೆಂಪು ರವರ ಗೀತೆಯನ್ನು ಪ್ರಾರ್ಥನಾ ಕಾವ್ಯವಾಗಿ ಹಾಡಿದರು.







ಕರ್ನಾಟಕ ರಾಜ್ಯ ನಿವೃತ್ತ ಪೊಲೀಸ್ ಅಧಿಕಾರಿಗಳ ಕ್ಷೇಮಾಭಿವೃದ್ಧಿ ಸಂಘದ ಕಾರ್ಯದರ್ಶಿಯವರಾದ ಶ್ರೀಯುತ ಎಮ್. ಶಂಕರಪ್ಪ ನವರು ಕರ್ನಾಟಕ ರಾಜ್ಯೋತ್ಸವದ ಧ್ವಜಾರೋಹಣ ಕಾರ್ಯಕ್ರಮಕ್ಕೆ ಆಗಮಿಸಿದ್ದವರೆಲ್ಲರನ್ನೂ ಹೃತ್ಪೂರ್ವಕವಾಗಿ ಸ್ವಾಗತಿಸಿ, ಕನ್ನಡ ನಾಡು ಗೋದಾವರಿಯಿಂದ ಕಾವೇರಿಯವರೆಗೆ ಹರಿದು ಹಂಚಿ ಹೋಗಿತ್ತು. ಆಲೂರು ವೆಂಕಟರಾಯರ ಕರ್ನಾಟಕ ಏಕೀಕರಣ ಆಂದೋಲನ, ಕನ್ನಡ ಭಾಷೆಯನ್ನು ಹಾಡು ಗೀತೆಗಳಿಂದ ಮನೆ ಮನಗಳಿಗೆ ತಲುಪಿಸಿದ ದಾಸ ಸಾಹಿತ್ಯದ ದಾಸ ವರೇಣ್ಯರಿಗೆ ನಮನ ಸಲ್ಲಿಸಿದರು. ಕನ್ನಡದ ಭಾಷೆಗೆ ಧಕ್ಕೆ ಬಂದಾಗ ಕರ್ನಾಟಕವನ್ನು ಒಗ್ಗೂಡಿಸಲು ಗೋಕಾಕ್ ಚಳವಳಿಯಲ್ಲಿ ಭಾಗವಹಿಸಿದ್ದ ಡಾ॥ ರಾಜ್ ಕುಮಾರ್ ರವರನ್ನು ಸ್ಮರಿಸಿದರು. ನೆರೆಹೊರೆಯ ಭಾಷೆಗಳೂ ಸೇರಿದಂತೆ, ಪಾಶ್ಚಿಮಾತ್ಯ ಸಂಸ್ಕೃತಿಗಳಿಂದ ಕನ್ನಡ ಭಾಷೆಗೆ ಆತಂಕ ಸೃಷ್ಟಿಯಾಗುತ್ತಿದೆ. ಏಳಿ, ಎದ್ದೇಳಿ ಎಂಬ ಕವಿ ವಾಣಿಯನ್ನು ಮೆಲಕು ಹಾಕುತ್ತಾ ಮುಂದಿನ ಪೀಳಿಗೆಗಾಗಿ ಕನ್ನಡ ಉಳಿಸಿ – ಬೆಳೆಸುವಂತೆ ರಾಜ್ಯೋತ್ಸವದ ಅಂಗವಾಗಿ ಸರಳವಾದ ಪ್ರಾಸ್ತಾವಿಕ ನುಡಿಗಳನ್ನಾಡಿದರು.









ಕರ್ನಾಟಕ ರಾಜ್ಯ ನಿವೃತ್ತ ಪೊಲೀಸ್ ಅಧಿಕಾರಿಗಳ ಕ್ಷೇಮಾಭಿವೃದ್ಧಿ ಸಂಘದ ಹಿರಿಯ ಸದಸ್ಯರಾದ ಶ್ರೀಯುತ ಶಿವಣ್ಣ ರವರು ಕರ್ನಾಟಕ ರಾಜ್ಯೋತ್ಸವದ ಧ್ವಜಾರೋಹಣ ಕಾರ್ಯಕ್ರಮಕ್ಕೆ ಆಗಮಿಸಿ, ಧ್ವಜಾರೋಹಣದಲ್ಲಿ ಜತೆಗೂಡಿ, ಕನ್ನಡ ಭಾಷೆಯ ಪ್ರಥಮ ಸಾಹಿತ್ಯ ಕವಿರಾಜ ಮಾರ್ಗದಿಂದ ಹಿಡಿದು ಹಳಗನ್ನಡ, ನಡುಗನ್ನಡ ಹಾಗೂ ನವೀನ ಶೈಲಿ ಭಾಷೆಯವರೆಗೆ ನಡೆಸಿದ ಸಾಹಿತ್ಯ ಕೃಷಿಕರನ್ನು ಸ್ಮರಿಸುತ್ತಾ, ೧೯೫೬ನೇ ಇಸವಿಯಲ್ಲಿ ಭಾಷಾವಾರು ಪ್ರಾಂತ್ಯಗಳಾಗಿ ವಿಂಗಡಣೆಯಾದಾಗ ನಮ್ಮ ನಾಡು ಮೈಸೂರು ಪ್ರಾಂತವಾಗಿ, ಏಕೀಕರಣದ ರೂವಾರಿ ಆಲೂರು ವೆಂಕಟರಾಯರ ನಡೆಸಿದ ಆಂದೋಲನದಿಂದ ಅನಂತರ ೧೯೭೩ನೇ ಇಸವಿ ನವೆಂಬರ್ ೧ ರಂದು ಕರ್ನಾಟಕ ರಾಜ್ಯವಾಗಿ ಮರು ನಾಮಕರಣಗೊಂಡ ಕರ್ನಾಟಕದ ನೆಲ, ಜಲ, ಕನ್ನಡ ಭಾಷೆ, ಸಾಹಿತ್ಯ, ಸಂಸ್ಕೃತಿ ರಕ್ಷಣೆಗೆ ನಡೆಸಿದ ಚಳವಳಿಗಳ ಕಾರಣಕರ್ತರಾದ ಮಹನೀಯರನ್ನು ನೆನೆಯುತ್ತಾ, ಅವರುಗಳಿಗೆ ಗೌರವಾರ್ಪಣೆ ಮಾಡಿ, ಕನ್ನಡ ಉಳಿಸಿ – ಬೆಳಸುವಂತೆ ರಾಜ್ಯೋತ್ಸವದ ಅಂಗವಾಗಿ ವಿವರವಾದ ಸ್ವಾತಂತ್ರ್ಯಾನಂತರ ಸಂಸ್ಥಾನಗಳಾಗಿ ಹರಿದು ಹಂಚಿ ಹೋಗಿದ್ದವು. ಆಡಳಿತದಲ್ಲಿ ಕನ್ನಡವನ್ನು ಅತಿ ಹೆಚ್ಚು ಬಳಕೆ ಮಾಡುವ ಬಗ್ಗೆ ಹಾಗೂ ಕನ್ನಡ ಭಾಷೆ ಬಗ್ಗೆ ನಡೆದ ಚಳವಳಿಗಳು, ಯುಗ ಕವಿಯ ಸ್ಮರಣೆ ಇತ್ಯಾದಿ ಸೇರಿದಂತೆ ನೆರೆದಿದ್ದವರಿಗೆಲ್ಲ ಕನ್ನಡ ಸಾಹಿತ್ಯ ಸಿಂಚನದಿಂದ ಸ್ನಾನ ಮಾಡಿಸಿದರು. ಮಾನ್ಯರಿಗೆ ಸಾಹಿತ್ಯದ ಬಗ್ಗೆ ಇರುವ ಆಳವಾದ ಜ್ಞಾನದಿಂದ ಸೇರಿದ್ದವರ ಮೈ ರೋಮಾಂಚನ ಗೊಂಡಿರುವುದರಲ್ಲಿ ಸಂದೇಹವಿಲ್ಲ ಎಂದೆಣಿಸಬಹುದು. ಮಾನ್ಯರ ನಿರಂತರ ಹಾಗೂ ನಿರರ್ಗಳ ಭಾಷಣವನ್ನು ಸಂಕ್ಷಿಪ್ತವಾಗಿ ಬಿತ್ತರಿಸಲು ಪ್ರಯತ್ನಿಸಲಾಗಿದೆ.



ಕರ್ನಾಟಕ ರಾಜ್ಯ ನಿವೃತ್ತ ಪೊಲೀಸ್ ಅಧಿಕಾರಿಗಳ ಕ್ಷೇಮಾಭಿವೃದ್ಧಿ ಸಂಘದ ಅಧ್ಯಕ್ಷರಾದ ಶ್ರೀಯುತ ಕೆ. ಬಿ. ಬೆಟ್ಟೇಗೌಡ ರವರು ತಮ್ಮ ಅಧ್ಯಕ್ಷೀಯ ಭಾಷಣದಲ್ಲಿ, ಎಲ್ಲರಿಗೂ ಕರ್ನಾಟಕ ರಾಜ್ಯೋತ್ಸವದ ಶುಭಾಶಯ ತಿಳಿಸಿದರು. ಕನ್ನಡ ಶಾಲೆಗಳಲ್ಲಿ ಭಾಷೆ ಉಪಯೋಗಿಸದಿದ್ದರೆ ಭಾಷೆ ಉಳಿಯುವುದಿಲ್ಲ. ಆಂಗ್ಲ ಭಾಷೆಯ ವ್ಯಾಮೋಹದಿಂದ ಕನ್ನಡ ಕಡೆಗಣನೆ ಇತ್ಯಾದಿ. ವಿಶ್ವದಲ್ಲಿರುವ ಭಾಷೆಗಳಲ್ಲಿ ಕನ್ನಡ ಭಾಷೆ ಕೂಡ ಒಂದು. ಕರ್ನಾಟಕ ರಾಜ್ಯೋತ್ಸವದ ಸಂದರ್ಭದಲ್ಲಿ ಕುವೆಂಪುರವರ ಆಂಗ್ಲ ಭಾಷಿಕರೊಂದಿಗಿನ ಒಂದೆರಡು ಸನ್ನಿವೇಶಗಳನ್ನು ನೆನೆಸಿಕೊಂಡು ಚುಟುಕಾಗಿ ತಮ್ಮ ಅಧ್ಯಕ್ಷೀಯ ಭಾಷಣ ಮಾಡಿದರು.









ಕರ್ನಾಟಕ ರಾಜ್ಯ ನಿವೃತ್ತ ಪೊಲೀಸ್ ಅಧಿಕಾರಿಗಳ ಕ್ಷೇಮಾಭಿವೃದ್ಧಿ ಸಂಘದ ವಲಯ ಸಂಘಟನಾ ಕಾರ್ಯದರ್ಶಿಯವರಾದ ಶ್ರೀಯುತ ಎ. ಕೆ. ತಿಮ್ಮಯ್ಯ ರವರು ಕರ್ನಾಟಕ ರಾಜ್ಯೋತ್ಸವದ ಧ್ವಜಾರೋಹಣ ಕಾರ್ಯಕ್ರಮದಲ್ಲಿ ಕಾರ್ಯಕ್ರಮಕ್ಕೆ ಆಗಮಿಸಿದ್ದವರೆಲ್ಲರಿಗೂ ಹೃತ್ಪೂರ್ವಕವಾದ ಧನ್ಯವಾದದ ವಂದನಾರ್ಪಣೆ ಮಾಡಿದರು.



ಕರ್ನಾಟಕ ರಾಜ್ಯ ನಿವೃತ್ತ ಪೊಲೀಸ್ ಅಧಿಕಾರಿಗಳ ಕ್ಷೇಮಾಭಿವೃದ್ಧಿ ಸಂಘದ ರಾಜ್ಯ ಸಂಘಟನಾ ಕಾರ್ಯದರ್ಶಿಯವರಾದ ಶ್ರೀಯುತ ಎನ್. ಎಮ್. ರಾಮಲಿಂಗಪ್ಪ ನವರು ಕರ್ನಾಟಕ ರಾಜ್ಯೋತ್ಸವದ ಧ್ವಜಾರೋಹಣ ಕಾರ್ಯಕ್ರಮದಲ್ಲಿ ತಮ್ಮ ನಿರರ್ಗಳ ಮಾತಿನ ಧಾಟಿಯಲ್ಲಿ ಇಡೀ ಕಾರ್ಯಕ್ರಮವನ್ನು ಅಚ್ಚುಕಟ್ಟಾಗಿ ನಿರೂಪಿಸಿದರು.



ಕರ್ನಾಟಕ ರಾಜ್ಯ ನಿವೃತ್ತ ಪೊಲೀಸ್ ಅಧಿಕಾರಿಗಳ ಕ್ಷೇಮಾಭಿವೃದ್ಧಿ ಸಂಘದ ವತಿಯಿಂದ ಎಲ್ಲರಿಗೂ ವ್ಯವಸ್ಥೆ ಮಾಡಲಾಗಿದ್ದ ಲಘು ಉಪಹಾರದೊಂದಿಗೆ ಕಾರ್ಯಕ್ರಮ ಸಂಪನ್ನ ವಾಗಿರುತ್ತದೆ.







ಸಂಘವು ಆಯೋಜಿಸಿದ್ದ ಸರಳ ಸಮಾರಂಭಕ್ಕೆ ಹಿರಿಯ/ಕಿರಿಯ ಸದಸ್ಯರೂ ಸೇರಿದಂತೆ ಹೆಚ್ಚು ಮಂದಿ ಹಾಜರಿದ್ದು, ಕರ್ನಾಟಕ ರಾಜ್ಯೋತ್ಸವ ಸಮಾರಂಭದ ಸಂಭ್ರಮಕ್ಕೆ ಶೋಭೆ ತಂದು ಯಶಸ್ವಿಯಾಗಲು ಸಹಕರಿಸಿದರು.
































ಕರ್ನಾಟಕ ರಾಜ್ಯ ನಿವೃತ್ತ ಪೊಲೀಸ್ ಅಧಿಕಾರಿಗಳ ಕ್ಷೇಮಾಭಿವೃದ್ಧಿ ಸಂಘ,
ಬೆಂಗಳೂರು – ೫೬೦ ೦೨೩

* * * * *